ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20–09–2019ರಲ್ಲಿ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಯೋಜನೆಯ ಅನುದಾನದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ "Improvements to roads, drains and other developmental works in ward no. 03 & 04 under road developmental head in Chief Minister Navanagarothan grants of Yelahanka Division (Package-03)" ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್‌ಗೆ ಅನುಮೋದನೆ ನೀಡುವ ಬಗ್ಗೆ.

Special Commissioner (Project) Bruhat Bangalore Mahanagara Palike
ಸಂಖ್ಯೆ: 3642
ದಿನಾಂಕ: 21/3/2020

ಮುಖ್ಯ ಅಭಿಯಂತರರ ಕಛೇರಿ
ಸ್ವೀಕರಿಸಲಾದದ:
13 MAY 2020
42
ಬಿ.ಬಿ.ಎಂ.ಪಿ,ಯಲಹಂಕ ವಲಯ.

1. ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20–09–2019.
2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಆಯುಕ್ತರು/ಪಿಆರ್/52/2019–20, ದಿನಾಂಕ: 01–02–2020.
3. ದಿನಾಂಕ: 18–02–2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿ.

* * * * *

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 20–09–2019ರ ಆದೇಶದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2018–19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಲು ಉದ್ದೇಶಿಸಿ, ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 01–02–2019 ರಂತೆ ಅನುಮೋದಿಸಿದ್ದ, "ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆ"ಯನ್ನು ರದ್ದುಪಡಿಸಿ, ಪರ್ಯಾಯವಾಗಿ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾ ಯೋಜನೆಗೆ ಕೆಲವೊಂದು ಷರತ್ತುಗಳಿಗೆ ಒಳಪಟ್ಟು ಅನುಮೋದನೆಯನ್ನು ನೀಡಲಾಗಿದ್ದು, ಸದರಿ ಆದೇಶದ ಅನುಬಂಧ–2ರ ಕ್ರಮ ಸಂಖ್ಯೆ: 1517, 1518, 1520, 1521 ಮತ್ತು 1522ರ ಕಾಮಗಾರಿಗಳಿಗೆ ರೂ.10.00 ಕೋಟಿಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ಜಂಟಿ ಆಯುಕ್ತರು ಯಲಹಂಕ ಉಪನಗರ ಪಾಲಿಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮೇಲ್ಕೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 01–02–2020ರ ಪತ್ರದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು "ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆಯಡಿ" ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018 ಬೆಂಗಳೂರು, ದಿನಾಂಕ:20–09–2019ರ ಅನುಬಂಧ–2 ರಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಅನುಮೋದನೆ ನೀಡಿರುತ್ತದೆ.

| | Package-03 | ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| 1517 | Improvements to roads and drains at SFS 407 and surrounding areas in ward no:03 Yelahanka Satellite Town sub Division | 200.00 |
| 1518 | Improvements to roads and drains at yelahanka newtown 4th phase and surrounding areas in ward no:03 Yelahanka Satellite Town sub Division | 200.00 |

JC (Yelahanka)

ಜಂಟಿ ಆಯುಕ್ತರು ಕಛೇರಿ ಯಲಹಂಕ ವಲಯ, ಬಿಬಿಎಂಪಿ 14/5/2020

2/24 18-5-2020

| | | |
|---|---|---|
| 1520 | Improvements to roads and drains at Industrial area, 5th phase and surroudings area in ward no:03 Yelahanka Satellite Town sub Division | 200.00 |
| 1521 | Improvements to roads and drains at balance main and cross roads of Santhosh Nagara, Escorts Engineering layouts and surrounding areas in ward no:03 Yelahanka Satellite Town sub Division | 200.00 |
| 1522 | Improvements to roads and drains at Akshaya Nagara, Muneshwara layout and surrounding area in ward No :03 Yelahanka Satellite Town sub Division | 200.00 |
| | **TOTAL** | **1000.00** |

"Improvements to roads, drains and other developmental works in ward no. 03 & 04 under road developmental head in Chief Minister Navanagarothan grants of Yelahanka Division (Package-03)" ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ, ಟೆಂಡರ್ ಪ್ರಕಟಣೆ ಸಂಖ್ಯೆ: BBMP/YNK.D/EE/E-pmt/12/2019-20, ದಿನಾಂಕ: 08-11-2019 ರಲ್ಲಿ ರೂ.1000.00 ಲಕ್ಷಗಳ ಅಂದಾಜು ಮೊತ್ತಕ್ಕೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತ ರೂ.8,40,25,000.00 ಗಳಾಗಿದ್ದು, ಸದರಿ ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: 02-12-2019 ರಂದು ತೆರೆಯಲಾಗಿದ್ದು, ಪ್ಯಾಕೇಜ್-03 ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಇಬ್ಬರು ಗುತ್ತಿಗೆದಾರರೂ ಸಹಾ ಅರ್ಹರಾಗಿರುತ್ತಾರೆ. ಆರ್ಥಿಕ ಬಿಡ್ಡನ್ನು ದಿನಾಂಕ: 09-01-2020 ರಂದು ತೆರೆಯಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ ಎಂದು ಆಯುಕ್ತರು ಬಿಬಿಎಂಪಿ ಇವರು ತಿಳಿಸಿರುತ್ತಾರೆ.

| ಕ್ರ ಸಂ. | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಟೆಂಡರ್ ಗಿಟ್ಟಿ ಮೊತ್ತ 2018-19 ರ ಅನುಮೋದಿತ ದರಗಳಿಗೆ ಹೋಲಿಸಿದಾಗ. | ಟೆಂಡರ್ ಗಿಟ್ಟಿ ಮೊತ್ತ 3-1-2020ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ. | ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂಗಳಲ್ಲಿ) | 2018-19ನೇ ಸಾಲಿನ ಎಸ್.ಆರ್ ದರಗಳಿಗೆ ಹೋಲಿಸಿದಾಗ ಶೇಕಡವಾರು | ದಿನಾಂಕ: 3-1-2020ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡ |
|---|---|---|---|---|---|---|---|
| 1 | Sri C R Girish (M/s.Ram and Company) | 1000.00 | 8,40,25,000.00 | 8,02,90,991.69 | 9,19,66,877.82 | (+)9.45% | (+)14.54% |
| 2 | Sri Suryaprakash (M/s. Karthick enterprises) | | | | 10,03,25,802.82 | (+)19.39% | (+)24.95% |

ಪ್ಯಾಕೇಜ್-03ರ ಟೆಂಡರ್‌ನಲ್ಲಿ ಕನಿಷ್ಠ ದರ ನಮೂದಿಸಿದ ಗುತ್ತಿಗೆದಾರರಾದ Sri C R Girish (M/s.Ram and Company) ಇವರು ರೂ.9,19,66,877.82 ಗಳನ್ನು ನಮೂದಿಸಿದ್ದು, ಸದರಿ ದರವು ಲೋಕೋಪಯೋಗಿ ಇಲಾಖೆಯ ದರಗಳಿಗೆ ಹೋಲಿಸಿದಾಗ ಶೇ.+9.45%ರಷ್ಟು ಹಾಗೂ ದಿನಾಂಕ: 03-01-2020ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇ.+14.54% ರಷ್ಟು ಹೆಚ್ಚಾಗಿರುತ್ತದೆ ಎಂದು ಆಯುಕ್ತರು, ಬಿಬಿಎಂಪಿ ಇವರು ತಿಳಿಸಿರುತ್ತಾರೆ.

...3/-

ಎಲ್-1 ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಲಾಗಿದ್ದು, ದರ ಸಂಧಾನದ ನಂತರ ಗುತ್ತಿಗೆದಾರರು ರೂ.8,82,26,250.00 ಗಳನ್ನು ನಮೂದಿಸಿದ್ದು, ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.5.00% ಹಾಗೂ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇ.9.88ರಷ್ಟು ಹೆಚ್ಚಾಗಿರುತ್ತದೆ. ದಿನಾಂಕ: 27-01-2020ರಂದು ನಡೆದ ಆರ್ಥಿಕ ಮೌಲ್ಯಮಾಪನ ಸಮಿತಿ ಸಭೆಯಲ್ಲಿ ಸದರಿ ಟೆಂಡರನ್ನು ಅನುಮೋದಿಸಲು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ. ಆದುದರಿಂದ "Improvements to roads, drains and other developmental works in ward no. 03 & 04 under road developmental head in Chief Minister Navanagarothan grants of Yelahanka Division (Package-03)" ಕಾಮಗಾರಿಗಳ ರೂ.10.00 ಕೋಟಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್‌ಗೆ ಅನುಮೋದನೆ ನೀಡುವಂತೆ ಆಯುಕ್ತರು. ಬಿಬಿಎಂಪಿ ಇವರು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ: 18-02-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ಮುಂದೆ ಬಿ.ಬಿ.ಎಂ.ಪಿ. ಆಯುಕ್ತರ ದಿನಾಂಕ: 01-02-2020ರ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ವಿಷಯವನ್ನು ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

*"ವಿವರವಾದ ಚರ್ಚೆಯ ನಂತರ "Improvements to roads, drains and other developmental works in ward no. 03 under road developmental head in Chief Minister Navanagarothan grants of Yelahanka Division (Package-03)" ಪ್ಯಾಕೇಜಿನ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಟೆಂಡರ್‌ಗಿಟ್ಟ ಮೊತ್ತವಾದ ರೂ.8,40,25,000/- ಗಳಿಗೆ ಹೋಲಿಸಿದಾಗ 5% ಅಧಿಕ ಅಂದರೆ ರೂ.8,82,26,250/-ಗಳ C R Girish (M/s.Ram and Company) ರವರ ದರ ಸಂಧಾನಿತ ಬಿಡ್ಡನ್ನು ಅನುಮೋದಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು."*

ದಿನಾಂಕ: 18-02-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ ಈ ಕೆಳಕಂಡಂತೆ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ನಅಇ 45 ಎಂಎನ್‌ವೈ 2020 (3),**
**ಬೆಂಗಳೂರು, ದಿನಾಂಕ: 06-03-2020.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20-09-2019 ರಲ್ಲಿ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾ ಯೋಜನೆಯ ಆದೇಶದ ಅನುಬಂಧ-2ರ ಕ್ರಮ ಸಂಖ್ಯೆ: 1517, 1518, 1520, 1521 ಮತ್ತು 1522ರ ಕಾಮಗಾರಿಗಳನ್ನು ಒಗ್ಗೂಡಿಸಿ ಮಾಡಲಾಗಿರುವ "Improvements to roads, drains and other developmental works in ward no. 03 under road developmental head in Chief Minister Navanagarothan grants of Yelahanka Division (Package-03)" ಪ್ಯಾಕೇಜಿನ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ದಿನಾಂಕ: 18-02-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ C R Girish (M/s.Ram and Company) ರವರ ದರ ಸಂಧಾನಿತ ಬಿಡ್ಡನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.8,40,25,000/- ಗಳಿಗೆ ಹೋಲಿಸಿದಾಗ 5% ಅಧಿಕ ಅಂದರೆ ರೂ.8,82,26,250/-ಗಳ (ಎಂಟು ಕೋಟಿ ಎಂಭತ್ತೆರಡು ಲಕ್ಷದ ಇಪ್ಪತ್ತಾರು ಸಾವಿರದ ಎರಡುನೂರ ಐವತ್ತು ರೂಪಾಯಿಗಳು ಮಾತ್ರ) ಗಳಿಗೆ ಮಿತಿಗೊಳಿಸಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಟೆಂಡರ್‌ಗೆ ಅನುಮೋದನೆಯನ್ನು ನೀಡಿದೆ.

...4/-

ಷರತ್ತುಗಳು:

1. ಕಾಮಗಾರಿಗಳಿಗೆ ಬಿಡ್‌ದಾರರು ಒಪ್ಪದ ಪಕ್ಷದಲ್ಲಿ ಮರು ಟೆಂಡರ್ ಕರೆಯುವುದು.
2. ಮೇಲಿನ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ / ನಿಯಮಗಳು ಹಾಗೂ ಎಲ್ಲಾ ಚಾಲ್ತಿ ನಿಯಮಗಳನ್ನು ಪಾಲಿಸಿಕೊಂಡು ಅನುಷ್ಠಾನಗೊಳಿಸುವುದು.
3. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20-09-2019ರ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಯೋಜನೆಯ ಅನುದಾನದಲ್ಲಿ ಮೀಸಲಿಟ್ಟಿರುವ ಅನುದಾನದಲ್ಲಿ ಭರಿಸುವುದು.
4. ಮೇಲಿನ ಕಾಮಗಾರಿಯನ್ನು ಸರ್ಕಾರದಿಂದ ಮಂಜೂರಾದ ಮೊತ್ತದ ಮಿತಿಯಲ್ಲಿಯೇ ಯಾವುದೇ ಹೆಚ್ಚುವರಿಯಾಗದಂತೆ ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.
5. ಸರ್ಕಾರವು ಕಾಮಗಾರಿಗಳಿಗೆ ಆಡಳಿತಾತ್ಮಕ ಮತ್ತು ಟೆಂಡರ್‌ಗಳಿಗೆ ಅನುಮೋದನೆ ನೀಡಿದ್ದಾಗ್ಯೂ ಸಹ ಕಾಮಗಾರಿಯು ಪುನರಾವರ್ತನೆ ಆಗದಂತೆ ನೋಡಿಕೊಳ್ಳತಕ್ಕದ್ದು. ಅನುಮೋದನೆ ಗೊಂಡಿರುವ ಕಾಮಗಾರಿಯನ್ನಲ್ಲದೆ ಯಾವುದೇ ಕಾರಣಕ್ಕೆ ಬೇರೆ ಕಾಮಗಾರಿಗಳನ್ನು ಕೈಗೊಳ್ಳಬಾರದು.
6. ಕರ್ನಾಟಕ ಆರ್ಥಿಕ ಸಂಹಿತೆ 1958 ಸಾಧಿಲ್ವಾರು ವೆಚ್ಚ ಕೈಪಿಡಿ ಅಧಿನಿಯಮ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಕಾಯ್ದೆ ನಿಯಮಗಳುಸಾರ ಕ್ರಮವಹಿಸತಕ್ಕದ್ದು.
7. ಮೇಲಿನ ಕಾಮಗಾರಿಗೆ 3rd Party Quality Monitors ಗಳನ್ನು ನೇಮಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.
8. ದಿನಾಂಕ: 18-02-2020ರ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಯಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಹಾಗೂ ನಿಬಂಧನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಲಕ್ಷ್ಮೀ ಸಾಗರ್ ವಿ.ಎಸ್.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣಿ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3 ಮತ್ತು 9), ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿಗಳು-3 ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
11. ಕಾರ್ಯಪಾಲಕ ಅಭಿಯಂತರರು (ತಾಂತ್ರಿಕ ಕೋಶ), ನಗರಾಭಿವೃದ್ಧಿ ಇಲಾಖೆ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.